ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ರ 1909—10ನೆ ಇಸವಿ ಮಿ|| ಅರ್ಜೀ ನಂಬರ್ 310.

ಬೆಂಗಳೂರು ಹಳೆ ಸವಾರ್‌ಲೈನ್ನಲ್ಲಿದ್ದು ಫವತಿಪಟ್ಟ ಸೈದುಹಾಫೀಜ್ ಬಹದ್ದೂರ್ ರಿಜಮೆಂಟ್‌ದಾರ) ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಹಳೀಸವಾರ್‌ಲೈನ್ನಲ್ಲಿರುವ ಮಹಬೂಬಿ ಎಂಬುವರು, ಮೃತಪಟ್ಟ ಸದರೀ ಸೈದುಹಾಫೀಜ್ ಬಹದ್ದೂರ್‌ರವರಿಗೆ ಖಾಸಾ ಹೆಂಡತಿ ಆಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಸೈದುಹಾಫೀಜ್ ಬಹದ್ದೂರ್‌ರವರ ಜಿಂದಗಿ ಬಗ್ಯಾಗಿ ಬರತಕ್ಕ ರೂಪಾಯಿ (2,870—14—7)ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಮಹಬೂಬಿ ಅರ್ಜಿಯನ್ನು ಸ್ರ 1910ನೆ ಇಸವಿ ಜನವರಿ 7ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೈದುಹಾಫೀಜ್ ಬಹದ್ದೂರ್) ವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ 1909ನೆ ಇಸವಿ ಡಿಸೆಂಬರ್ ತಿಂಗಳು 6ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ರ 1909—10ನೆ ಇಸವಿ ಮಿ|| ನಂಬರ್ 320.

ಬೆಂಗಳೂರು ಚಿಕ್ಕ ಮಾವಹಳ್ಳಿಯಲ್ಲಿದ್ದು ಮೃತಪಟ್ಟ ಮುನಿವೆಂಕಟವು ನವರ ಆಸ್ತೀ ವಿಷಯವಲ್ಲಿ —

ಅರ್ಜೀದಾರು) ಚಿಕ್ಕ ಮಾವಹಳ್ಳಿಲಿರುವ ಮಡಿವಾಳ ಲಿಂಗಂಣನ ಮಗಳು ಮುನಿಯಮ್ಮನ ಮಗ ತಿಮ್ಮನಿಗೆ ಮೃತಪಟ್ಟ ಸದರೀ ಮುನಿವೆಂಕಟಮ್ಮನು ಮುಖ್ಯ ವಾರಸುದಾರು) ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ, ವೆಂಕಟಮ್ಮನ ಜಿಂದಗಿ ಬಗ್ಯಾಗಿ ಬರತಕ್ಕ ರೂಪಾಯಿ (396—12—0) ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮಡಿವಾಳ ತಿಮ್ಮನ ಅರ್ಜಿಯನ್ನು 1910ನೆ ಇಸವಿ ಜನವರಿ ತಿಂಗಳು 14ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟಮ್ಮನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರಿರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ 1909ನೆ ಇಸವಿ ಡಿಸೆಂಬರ್ ತಿಂಗಳು 6ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ರ 1909—10ನೆ ಇಸವಿ ಮಿ|| ಅರ್ಜೀ ನಂಬರ್ 327.

ಬೆಂಗಳೂರು ಜನರಲ್ ಮತ್ತು ರೆವಿನ್ಯೂ ಸೆಕ್ರಿಟೆರಿಯಟ್ಟಿನಲ್ಲಿ ಕ್ಲಾರ್ಕ್ ಆಗಿದ್ದು ಮೃತಪಟ್ಟ ಎಚ್. ವೆಂಕಟಾಚಾರ್) ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಶ್ರೀನಿವಾಸಕೃಷ್ಣಾಚಾರ್ ವಗೈರೆ, ಮೃತಪಟ್ಟ ಸದರಿ ಎಚ್. ವೆಂಕಟಾಚಾರ್ರಿಗೆ ಮುಖ್ಯ ವಾರಸ್‌ದಾರು) ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಎಚ್. ವೆಂಕಟಾಚಾರ್) ಜಿಂದಗಿ ಬಗ್ಯಾಗಿ ಬರತಕ್ಕ ರೂಪಾಯಿ 3,141—5—1 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ 1ನೆ ಶ್ರೀನಿವಾಸಕೃಷ್ಣಾಚಾರ್) ಹೆಂಡತಿ ಶ್ರೀರಂಗಮ್ಮಾಳ್, 2ನೆ ಕೃಷ್ಣಯ್ಯಂಗಾರ್) ಹೆಂಡತಿ ಅಲಮೇಲಮ್ಮಾಳ್, 3ನೆ ಲಕ್ಷ್ಮಮ್ಮಾಳ್, 4ನೆ ಅನ್ನಪೂರ್ಣಮ್ಮಾಳ್ ಇವರುಗಳ ಅರ್ಜಿಯನ್ನು ಸ್ರ 1909ನೆ ಇಸವಿ ಡಿಸೆಂಬರು ತಿಂಗಳು ತಾರೀಖು 17ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಎಚ್. ವೆಂಕಟಾಚಾರ್) ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ 1909ನೆ ಇಸವಿ ಡಿಸೆಂಬರ್ ತಿಂಗಳು 2ನೆ ತಾರೀಖಿನಲ್ಲಿ ಕೋರ್ಟು ಮೊಹರಿ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಬಿ. ನಾಗಪ್ಪ,
ಸಬ್ ಜಡ್ಜ್.

ಮೈಸೂರು ಸಬಾರ್ಡಿನೇಟ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಮೈಸೂರು ಕಿಲ್ಲೆಯಲ್ಲಿರುವ ವಾಳಿಪಾದ ಡಿಕ್ರೀ ದೇಶೋದಾರ ವೆಂಕಟ್ರಮಣಶಾಸ್ತ್ರಿ ಉರಫ್ ಪುಟ್ಟುಶಾಸ್ತ್ರಿ ಎಂಬುವರ ವಿಷಯದಲ್ಲಿ—

ಸ್ರ 1908—09ನೆ ಇಸವಿ ದಿವಾಳಿ ಕೇಸ್ ನಂಬರ್ 115.

ಹುಕ್ಕುಂ

ವೇಲ್ಲಂಡ ವೆಂಕಟ್ರಮಣಶಾಸ್ತ್ರಿ ಉರಫ್ ಪುಟ್ಟುಶಾಸ್ತ್ರಿ ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಈ ಕೋರ್ಟ್ ರೂಬರೂಬ್ ಅರ್ಜೀದಾರರಾದ ವೆಂಕಟ್ರಮಣ ಶಾಸ್ತ್ರಿ ಉರಫ್ ಪುಟ್ಟುಶಾಸ್ತ್ರೀರ ಪರವಾಗಿ ಅಡ್ವೊಕೇಟ್ ಮಿ|| ಕಂ ತೀರವಾಚಾರ್ಯನ್ನು ಮತ್ತು ಸದರೀಯವರ ಲೇಣೇದಾರರಾದ 1ನೆ ಲಕ್ಷ್ಮೀನಾರಾಯಣಶೆಟ್ಟರ ತರಫ್ ಮಿ|| ಎಂ. ಎಸ್. ಕೃಷ್ಣಸ್ವಾಮಿ ರಾವ್, 3ನೆ ಬಟ್ಟುಚಾರಿ ತರಫ್ ಬಿ. ಆರ್. ಕೃಷ್ಣಮಾಚಾರ್ಯ, 5ನೆ ನಾರಾಯಣನಾಮ್ಮೆಯ್ಯಂಗಾರ್ ತರಫ್ ಮಿ|| ಹೆಚ್. ನರಸಿಂಗರಾಯರು 6-7-12-14 ಮತ್ತು 20ನೆ ಕ್ರಿಡಿಟರುಗಳು ಖುದ್ದು ಹಾಜರಾಯಲ್ಲಿ ದರ್ಖಾಸ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಖಾಸ್ತ್ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿ ಯಾಗಲೀ ಅಥವಾ ಲಾಯರ್ ಮೂಲಕವಾಗಿ ಯಾಗಲೀ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ 2ನೆ ಕೃಷ್ಣಪ್ಪ, 4ನೆ ವೆಂಕಟರಾವ್, 8ನೆ ರಾಮನರಸೈಯ್ಯ, 9ನೆ ಶ್ರೀನಿವಾಸ್ಸೆಯ್ಯಂಗಾರ್ರು, 10ನೆ ಅಬ್ದುಲ್ ಅಜೀಜ್, 11ನೆ ಮರಿಪುಟ್ಟಣ್ಣ, 13ನೆ ಅಳಸಿಂಗಾಚಾರ್, 15ನೆ ದಕ್ಷಿಣಾಮೂರ್ತ್ಯಾಚಾರ್, 16ನೆ ಸುಬ್ಬಾವ್, 17ನೆ ವಲ್ಲಮ್ಮ, 18ನೆ ತಿಮ್ಮಮ್ಮ, 19ನೆ ಚಲುವೈಯ್ಯ, 21ನೆ ಪೀಟರ್ ಹೇಸ್, 22ನೆ ವೆಂಕಟರಂಗಯ್ಯ ಉರಫ್ ಕೃಷ್ಣರಾವ್, 23ನೆ ರುಕ್ಮಾಜಿ 24ನೆ ರಾಜಪ್ಪ.

ಸಿವಿಲ್ ಪ್ರೊಸೀಜ್ಯೂರ್ ಕೋಡಿನ 20ನೆ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ವೆಂಕಟ್ರಮಣ ಶಾಸ್ತ್ರಿ ಉರಫ್ ಪುಟ್ಟುಶಾಸ್ತ್ರಿಯವರು ಹೊಂದುವದಕ್ಕೆ ಪಕ್ಕಾದಾರರಾಗುವದರೆ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿನೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲ ಕ್ಕೂ ಇಸ್ಕರವಾಗಿಯಾಗಲೀ ಪಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವರನ್ನು ನಿಖಾಲಸು ಮಾಡಲಾಗಿರುತ್ತೆ ಎಂದು ಇದರಿಂದ ಹುಕ್ಕುಂ ಮಾಡಲ್ಪಟ್ಟು ಇರುತ್ತೆ.

ಸ್ರ 1909ನೆ ಇಸವಿ ನವಂಬರ್ 10ನೆ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ಮತ್ತು ನನ್ನ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರ್.	ಲೇಣೇದಾರ, ಅಥವಾ ಹಕ್ಕುದಾರರ ಹಸರು ಮತ್ತು ವಿವರ ಮತ್ತು ಹಾಲಿ ತಿಯಬಂದ ಅವರುಗಳ ವಾಸಸ್ಥಳ.	ಜೆಂಬಲಗು.			ಡಿಕ್ರೀ ಪ್ರಕಾರ ಇನ್ಸ್ಟಾಲ್‌ಮೆಂಟ್ ಪಡೆಯುವದಕ್ಕೆ ಇರುವ ಹಕ್ಕು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಏನಾದರೂ ಇದ್ದರೆ.	ಪರಾ.
		ರೂ.	ಆ.	ಪೈ.			
1	ಮೈಸೂರು ಕಿಲ್ಲೆಯಲ್ಲಿರುವ ಮನ್ನಾರ್ ಕೃಷ್ಣಶೆಟ್ಟರ ಲಕ್ಷ್ಮೀನಾರಾಯಣಶೆಟ್ಟರು.	246	2	8	...	ಡಿಕ್ರೀ ಬಾಬತು.	
3	ಡಿಟೋ ಸ್ಥಳದಲ್ಲಿರುವ ಚಿನ್ನಕೆಲಸದ ಕೃಷ್ಣಾಚಾರಿ ಮಗ ಬೆಟ್ಟುಚಾರಿ 1 ಮೈಸೂರು ಅಡಿಷನಲ್ ಮುನ್ಸಿಫ್ ಕೋರ್ಟು ಸಿವಿಲ್ 142-07-8ನೆ ನಂಬರು ಡಿಕ್ರೀ ಬಾಬತು.	1,856	0	9	...	ಡಿಟೋ	
	2 ಮೈಸೂರು ಸಬಾರ್ಡಿನೇಟ್ ಜಡ್ಜ್‌ರವರ ಕೋರ್ಟು ಸಿವಿಲ್ 16-08-9ನೆ ನಂಬರು ಡಿಕ್ರೀ ಬಾಬತು.	3,526	7	2	...	ಡಿಟೋ	
5	ಮೈಸೂರು ಸುಬ್ಬಾಯನಕೆರೆಬಳಿ ಇರುವ ಕುಂಭಕೋಣಿ ಜವಳಿ ನಾರಾಯಣಸಾಮೈಯಂಗಾರ್ರು ಮೈಸೂರು ಮುನ್ಸಿಪಲ್ ಮುನ್ಸೀಫ್ ಕೋರ್ಟು ಸಿವಿಲ್ 469-06-07ನೆ ಡಿಕ್ರೀ ಮೊಬಲಗು ಕೋರ್ಟು ಖರ್ಚು ವಗೈರೆ ವಸೂಲ್ 101 ರೂಪಾಯಿ ಜಾತಾ ಬಾ.	540	7	10	...	ಡಿಟೋ	
6	ಮೈಸೂರು ಇಟ್ಟಿಗೆಗೂಡಿನಲ್ಲಿ ವಸ ಜವಳಿ ವ್ಯಾಪಾರ ಈಪ್ಪ ಮೊದಲಿ ಮತ್ತು ಆಸ್ಥಾನ ಮೊದಲಿಯಾರಿಗೆ.	2,600	0	0	...	ಲಿಕ್ಕದ ಬಾಬತು.	

ನಂಬರ್	ಲೇಹೋದಾರ್ರ ಅಥವಾ ಹಕ್ಕುದಾರರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯ ಬಂದ ಅವರುಗಳ ವಾಸಸ್ಥಳ.	ಮೊಬಲಗು.	ಬಡ್ಡಿ ಯಾವಾಗ ಬೇಕೆಂದು ಕೇಳಿಕೊಂಡಿದ್ದಾನೆ	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಏನಾದರೂ ಇದ್ದರೆ,	ಷರಾ.
		ರೂ. ಆ. ಪೈ.			
7	ಮೈಸೂರು ದೇವಾಂಬಾ ಅಗ್ರಹಾರದಲ್ಲಿರುವ ನಾಟಂಪಳ್ಳಿ ಶ್ರೀನಿವಾಸ್ಯೈಯ್ಯಂಗಾರ್ರಿಗೆ ಈ ಕೋರ್ಟು ಮಿಸ್. 105 09-10ನೆ ನಂಬರು ಆರ್ಡರ್ ಮೇರಿಗೆ.	3 0 0 0	17-6-07	ಪ್ರಾಮಿಸರಿ ಬಾಬತು.	
12	ಮೈಸೂರು ಮಂಡಿಮೊಹಲ್ಲಾ ಹುಚ್ಚಗಿರಿಯಪ್ಪನ ಗರಡಿಬಳಿ ಇರುವ ಕಂಟ್ರಾಕ್ಟರು ದೊರಸಾಮಿಪಿಳ್ಳೆ.	133 0 0	...	ಪತ್ರದ ಬಾಬತು.	
14	ಮೈಸೂರು ಲಕ್ಷ್ಮೀವಿಲಾಸ ಅಗ್ರಹಾರದಲ್ಲಿರುವ ಪ್ಲೀಡರ್ ಕೃಷ್ಣಸ್ವಾಮಿಅಯ್ಯರ ಮಗ ವಾಸ್ಯೆ ನಂಜುಂಡೈಯ್ಯ.	100 0 0	...	ಪ್ರಾಮಿಸರಿ ಬಾಬತು.	
20	ಮೈಸೂರು ದೊಡ್ಡಪೇಟೆಲಿರುವ ಬೂದಗುಂಟೆ ರಾಮಕೆಟ್ಟರ ಮಕ್ಕಳು ವೆಂಕಟ್ರುವಣಕೆಟ್ಟರು, ಮೈಸೂರು ಸಬ್ ಕೋರ್ಟು ಜಾರಿ 197-09-10ನೆ ನಂಬರು ಆರ್ಡರು ಮೇರಿಗೆ ಸದರೀ ಕೋರ್ಟು ಸ್ಮಾಲ್‌ಕಾಜ್ 255-08-9ನೆ ಡಿಕ್ರಿ ಬಾಬತು.	73 2 0	12-7-09	ಡಿಕ್ರಿ ಬಾಬತು.	

ಬಿ. ಎಸ್. ಕೃಷ್ಣಸ್ವಾಮಿ ಐಯ್ಯಂಗಾರ್,
ಸಬ್ ಜಡ್ಜ್.

ಮೈಸೂರು ಗವರ್ನಮೆಂಟ್ ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರರವರ ಆಫೀಸಿನಿಂದ.

ನೋಟಿಫಿಕೇಷನ್ ನಂಬರ್ 714—C. S.-24.

ಬೊಕ್ಕಾಂ ಬೆಂಗಳೂರು, ತಾರೀಖು 17—18ನೆ ಡಿಸೆಂಬರ್ 1909.

ಮೈಸೂರು ಗವರ್ನ್‌ಮೆಂಟ್ 6—8—09ನೆ ಮಾರ್ಕ್ಯಂ Fl. 1290-9—B. 55-09-2ನೆ ನಂಬರು ಆರ್ಡರು ಅನುಸರಿಸಿ ಈ ಕೆಳಗೆ ನಮೂದಿಸಿರುವ ರಿಟೈರ್ಡ್ ತಾಲ್ಲೂಕು ಶಿರಸ್ತೇದಾರ್ರುಗಳನ್ನು ಅವರ ಹೆಸರುಗಳ ಎದುರಿಗೆ ನಮೂದಿಸಿರುವ ತಾಲ್ಲೂಕುನಲ್ಲಿರುವ ಕೋ ಆಪರೇಟಿವ್ ಸೊಸೈಟಿಗಳನ್ನು ವೇಲ್ವಿಚಾರಣೆ ಮಾಡಲು ನೇಮಿಸಲ್ಪಟ್ಟಿರುತ್ತಾರೆ.

	ಹೆಸರು	ತಾಲ್ಲೂಕು.
1.	ವಿ॥ ಕೃಷ್ಣಯ್ಯಂಗಾರ್ರು	ಮೈಸೂರು
2.	,, ಡಿ. ಬಿ. ಲಕ್ಷ್ಮಣರಾವ್	ತುಮಕೂರು
3.	,, ಶ್ರೀನಿವಾಸರಾವ್ ಉರುಫ್ ಗುಂಜೂರಾವ್	ಬೆಂಗಳೂರು
4.	,, ಎ. ಡಿ. ನಾರಣಪ್ಪ	ಹಾಸನ ಮತ್ತು ಆಲೂರು ಸಬ್ ತಾಲ್ಲೂಕು.

ಎಂ. ರಾಮರಾವ್,
ಮೈಸೂರು ಗವರ್ನಮೆಂಟ್ ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್.